# ಆಹಾ ಸುದ್ದಿ!

★ ಸಸಿತೋಟ

ಫ್ಲಾರಿಡಾದಲ್ಲಿ ಇರ್ಮಾ ಚಂಡಮಾರುತದಿಂದ ಅಸ್ತವ್ಯಸ್ಥಗೊಂಡ ವಿದ್ಯುತ್ ಲೈನನ್ನು ಎಷ್ಟು ದಿನಗಳಾದರೂ ಸರಿಪಡಿಸದಿರುವುದಕ್ಕೆ ಈ ಯುವತಿ ತಲೆ ಓಡಿಸಿ ಮನೆಯ ಮುಂದೆ ಈ ರೀತಿ ಬರೆದ ಫಲಕ ಹಾಕಿದಳಂತೆ. ಆಕೆಯ ಉಪಾಯ ಫಲಿಸಿತು. ಕೆಲವೇ ಗಂಟೆಗಳಲ್ಲಿ ಮನೆಗೆ ವಿದ್ಯುತ್ ಬಂತಂತೆ. ಬೇಕಿದ್ದರೆ ವಿದ್ಯುತ್ಕ್ರಾಂತೀಯ ಆಕರ್ಷಣೆ ಎನ್ನಬಹುದು.




ಚೀನಾದಲ್ಲಿ ಯುವಕನೊಬ್ಬನನ್ನು ತುರ್ತಾಗಿ ಆಸ್ಪತ್ರೆಗೆ ಸೇರಿಸಿ ಹೃದಯದ ಶಸ್ತ್ರಚಿಕಿತ್ಸೆ ನಡೆಸಿ ಗುಣಪಡಿಸಿದರು. ಆದರೆ ತನ್ನ ಮಗನ ಅಂಗಿಯನ್ನು ವೈದ್ಯರು ಹರಿದಿದ್ದಾರೆ, ಅದಕ್ಕೆ ಪರಿಹಾರ ನೀಡಬೇಕು ಎಂದು ಆ ಯುವಕನ ತಂದೆ ತಗಾದೆ ಶುರು ಮಾಡಿದನಂತೆ. ತುರ್ತು ಚಿಕಿತ್ಸೆಯಲ್ಲಿ ಅಂಗಿ ಹರಿದು ತೆಗೆಯುವುದು ಮಾಮೂಲು ಎಂದರೂ ಕೇಳದ ಆ ವೃದ್ಧನಿಗೆ ವೈದ್ಯರೇ ಹಣ ಕೊಟ್ಟು ತಲೆ ಮೇಲೆ ಕೈ ಹೊತ್ತರಂತೆ. ಇಂತಹ ರೋಗಿಗಳು ತಿಂಗಳಿಗೆ ಒಂದಿಬ್ಬರು ಬಂದರೂ ಸಾಕು, ವೈದ್ಯರೇ ತುರ್ತು ಚಿಕಿತ್ಸೆ ತೆಗೆದುಕೊಳ್ಳಬೇಕಾಗಬಹುದು.

ಇದೇನು, ಕಾಂಗರೂ ತರಹ ಹೊಟ್ಟೆಯೊಳಗಿನಿಂದ ಲಘು ಪಾನೀಯದ ಡಬ್ಬಿ ತೆಗೆಯುತ್ತಿದ್ದಾನೆ ಈ ವ್ಯಕ್ತಿ! ಅದು ಹೊಟ್ಟೆಯನ್ನು ಹೋಲುವ ಫ್ಯಾನಿ ಪ್ಯಾಕ್. ಪ್ರಯಾಣ ಮಾಡುವಾಗ ಸೊಂಟಕ್ಕೆ ಕಟ್ಟಿಕೊಳ್ಳುವ ಇದನ್ನು ಲಂಡನ್ನಿನ ವ್ಯಕ್ತಿಯೊಬ್ಬ ತಯಾರಿಸಿದ್ದಾನೆ. ಈ 'ಡ್ಯಾಡ್ ಬಾಡ್' ತಯಾರಿಕೆಗೆ ಮಧ್ಯ ವಯಸ್ಕರ ಡೊಳ್ಳು ಹೊಟ್ಟೆ ಪ್ರೇರಣೆಯಂತೆ.





ಶ್ರೀಲಂಕಾದಲ್ಲಿ ಈ ವಧು ಧರಿಸಿದ್ದು ಬರೋಬ್ಬರಿ 3.2 ಕಿ.ಮೀ. ಉದ್ದದ ಸೀರೆ. ವಧು–ವರ ರಸ್ತೆಯುದ್ದಕ್ಕೂ ನಡೆದುಕೊಂಡು ಹೋಗುವಾಗ ಸೀರೆಯ ಸೆರಗನ್ನು ಹಿಡಿದುಕೊಂಡವರು ಸುಮಾರು 250 ಮಂದಿ ವಿದ್ಯಾರ್ಥಿಗಳು. ದಾಖಲೆ ನಿರ್ಮಿಸಿದ ಖುಷಿಯ ಗುಳ್ಳೆ ಪೊಲೀಸರು ಬಂದಾಗ ಒಡೆದುಹೋಯ್ತಂತೆ. ಶ್ರೀಲಂಕಾದಲ್ಲಿ ಶಾಲಾ ಸಮಯದಲ್ಲಿ ವಿದ್ಯಾರ್ಥಿಗಳನ್ನು ಈ ರೀತಿ ಬಳಸಿಕೊಳ್ಳುವುದು ಅಪರಾಧವಾಗಿದ್ದು, 10 ವರ್ಷ ಜೈಲಂತೆ. ಭಾರತದಲ್ಲೂ ಅಂತಹ ಕಾನೂನಿದ್ದರೆ ಶಾಲಾ ಮಕ್ಕಳನ್ನು ಕಾಯಿಸುವ ರಾಜಕಾರಣಿಗಳು ಬೆವರೊರೆಸಿಕೊಳ್ಳಬೇಕಿತ್ತು.

ಗ್ರಾಹಕರ ಗಮನ ಸೆಳೆಯಲು ತರತರಹದ ಜಾಹೀರಾತುಗಳು ಕಾಣಿಸಿಕೊಳ್ಳುವುದು ಮಾಮೂಲು. ಅಮೆರಿಕಾದಲ್ಲಿ ರಿಯಲ್ ಎಸ್ಟೇಟ್ ಏಜೆಂಟ್ ಒಬ್ಬ ಮನೆ ಮಾರಾಟಕ್ಕಿಟ್ಟು 'ಶಾಂತವಾದ ನೆರೆಹೊರೆ' ಎಂದು ಜಾಹೀರಾತು ಕೊಟ್ಟನಂತೆ. ಆಸಕ್ತರು ಹೋಗಿ ನೋಡಿದರೆ ಅದು ಸ್ಮಶಾನದ ಪಕ್ಕಕ್ಕಿದ್ದ  ಮನೆ. ಹಗಲು ಶಾಂತವಾಗಿದ್ದರೂ ನೆರೆಯವರು ರಾತ್ರಿ ಗಲಾಟೆ ಮಾಡಿದರೆ...



ಅಮೆರಿಕದ ಪ್ರಥಮ ಮಹಿಳೆಯ ಹುಟ್ಟೂರು ಸಾಲ್ವೇನಿಯಾದ ಸೆವ್‌ನಿಕಾ. ಅಲ್ಲೀಗ ಅಮೆರಿಕದ 'ಅಧ್ಯಕ್ಷರ ಬರ್ಗರ್' ಜನಪ್ರಿಯವಂತೆ. ಬರ್ಗರ್ ಮೇಲೆ ಅಧ್ಯಕ್ಷ  ಟ್ರಂಪ್ ತಲೆಗೂದಲನ್ನು ಹೋಲುವ ಚೀಸ್ ಟಾಪಿಂಗ್. ಅದರೆ ಸ್ವಾದಿಷ್ಟ, ನೋಟದಲ್ಲಿ ಈ ಬರ್ಗರ್‌ಗೆ ಸೆಡ್ಡು ಹೊಡೆಯುವ ತಾಕತ್ತು ಟ್ರಂಪ್‌ಗೆ ಇದೆಯೇ?